Sri C. K. RAJAIAH SETTY.—May I know whether the Union Public Service Commission is not recognising the B.Sc. (Hons.) degree of the Mysore University?

Mr. SPEAKER.—The question has been answered.

Sri C. K. RAJAIAH SETTY.—Is it a fact that a person with B.Sc. (Hons.) degree of Mysore University can get a Master's degree of Madras University by merely paying nominal fees?

Mr. SPEAKER.—This is about Mysore University and not about Madras University.

Sri C. K. RAJAIAH SETTY.—It means the qualification is almost the same.

Mr. SPEAKER.—The question is about the recognition of B.Sc. (Hons.) degree of the Mysore University by the Union Public Service Commission, and not about the Madras University.

Sri C. K. RAJAIAH SETTY.—My point is that both the degrees are of the same standard; why this is not recognised by the Union Public Service Commission?

Mr. SPEAKER.—That has been answered.

Sri J B. MALLARADHYA.—In answer to (*b*) it is stated that the University of Mysore is taking necessary action in the matter. It is not a question of academic parity between the two degrees; it is a question of recognition. Is it at the Government level or University level that this matter is being pursued?

Sri S. NIJALINGAPPA.—No reply has been received from the Government of India. The University of Mysore represented to this Government and this Government has not felt the necessity of making a representation on behalf of the University of Mysore.

Sri J. B. MALLARADHYA.—Will the Government at least now take up the matter at the highest level as it affects the interests of a large number of students of the Mysore University?

Sri S. NIJALINGAPPA.—It is a suggestion for action.

Sri B. RACHIAH.—Is it not a fact that the University of Mysore has not recognised the B.Sc. (Hons.) Degree as equivalent to the Master's Degree?

Sri M. P. PATIL.—That is not the case. In the case of Andhra, and Madras Universities after taking the B.Sc. (Hons.) Degree, Master's Degree is given automatically on payment of a certain fee. But that is not the practice in Mysore. They will have to undergo the course. Therefore, the Union Service Commission has not recognised the B.Sc. (Hons.) Degree as equivalent to Master's Degree.

Proposal to divert Water from Yagachi River to Vanivilas Sagar

Q.—217. Sri V. SRINIVAS SETTY (Coondapur) [On behalf of SRI K. KENCHAPPA (Hiriyur)].—

Will the Government be pleased to state:—

(*a*) whether it has come to their notice that the quantity of receipt of water to the Vanivilas Sagar is being decreased year by year and as a consequence of this the land owners are suffering;

(*b*) whether they are aware of the proposal by the Chief Engineer during the course of construction of the Vanivilas Sagar that river Yagachi should be diverted to the Vedavathi Valley if the intended purpose of construction of the Vanivilas Sagar to the desired and anticipated extent should be achieved;

(*c*) the estimated amount proposed by the said Engineer;

(*d*) the probable estimate now for doing this work;

(*e*) whether this aspect of diverting the Yagachi river to Vedavathi Valley was considered and decided while proposals were being submitted to Central Government for acceptance during preparations of programmes for First and Second Five-Year plans;

(*f*) whether they propose any other method to maintain the Vanivilas Sagar in a condition in which it was constructed in respect of quantity of receipt of water, other than the circumstances of diverting Yagachi river?

A.—Sri H. K. VEERANNA GOWDH (Minister for Public Works).—

(*a*) No.

(SRI H. K. VEERANNA GOWDH)

(*b*) There was a proposal to that effect soon after the completion of the project.

(*c*) About Rs. 20.00 lakhs.

(*d*) About Rs. 1 crore.

(*e*) It was not considered on account of prohibitive cost and as it was found that the average inflow was sufficient for the area proposed to be irrigated.

(*f*) Does not arise in view of reply to (*a*) above.

ಶ್ರೀ ಬಿ. ಎಸ್. ಶಂಕರಪ್ಪ.—ವಾಣಿವಿಲಾಸಸಾಗರ ಕೆರೆಯನ್ನು ಕಟ್ಟುವಾಗ ಎಷ್ಟು ಎಕರೆ ಭೂಮಿ ಸಾಗುವಳಿಯಾಗುತ್ತದೆಂದು ಅಂದಾಜು ಮಾಡಲಾಗಿತ್ತು?

ಶ್ರೀ ಎಚ್. ಕೆ. ವೀರಣ್ಣಗೌಡ.—25 ಸಾವಿರ ಎಕರೆ ಸಾಗುವಳಿಯಾಗುತ್ತದೆಂದು ಅಂದಾಜು ಮಾಡಲಾಗಿತ್ತು.

ಶ್ರೀ ಬಿ. ಎಸ್. ಶಂಕರಪ್ಪ.—ಈಗ ಅಲ್ಲಿ ಎಷ್ಟು ಎಕರೆ ಸಾಗುವಳಿಯಾಗುತ್ತಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ 18 ಸಾವಿರ ಎಕರೆ ಸಾಗುವಳಿ ಯಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ವಾಣಿವಿಲಾಸಸಾಗರ ಕೆರೆಯನ್ನು ಕಟ್ಟಿ ದಂದಿನಿಂದಲೂ ಹತ್ತು ಸಾವಿರ ಎಕರೆ ಸಹ ಸಾಗುವಳಿಯಾಗುತ್ತಿಲ್ಲವೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಭಾಗದಲ್ಲಿ ಮಲೇರಿಯಾ ಹಾವಳಿ ಇತ್ಯಾದಿ ಕಾರಣಗಳಿಂದ ರೈತ ಆಬಾದು ಇಲ್ಲದೆ ಬಹಳ ಜಮೀನು ಪಾಳುಬಿದ್ದಿತ್ತು. ಪ್ರಾರಂಭದಲ್ಲಿ ಬಹಳ ಉತ್ಸಾಹದಿಂದ ಜನರು ಸಾಗುವಳಿಮಾಡಲು ಪ್ರಯತ್ನಮಾಡಿದರು. ಆದರೆ ಮಲೇರಿಯಾ ಹಾವಳಿಯಿಂದ ಒಂದು ಕಡೆ ನೊಂದು ಜನರು ನಿರುತ್ಸಾಹಿಗಳಾಗಿದ್ದರು. ಈಚೀಚೆಗೆ ಮಲೇರಿಯಾ ರೋಗವನ್ನು ತಡೆಗಟ್ಟಿದಮೇಲೆ ಜನರಲ್ಲಿ ಉತ್ಸಾಹ ಬರುತ್ತಿದೆ. ಈಗ 18 ಸಾವಿರ ಎಕರೆ ಸಾಗುವಳಿಯಾಗುತ್ತಿದೆ. ಕೆರೆಯಲ್ಲಿ ನೀರು ಇಲ್ಲದೆ ಸಾಗುವಳಿಯಾಗುತ್ತಿರಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—25 ಸಾವಿರ ಎಕರೆ ಜಮೀನು ಸಾಗುವಳಿಯಾಗುವುದಕ್ಕೆ ಎಷ್ಟು ನಾಲೆಗಳು ಬೇಕೋ ಅಷ್ಟು ನಾಲೆಗಳನ್ನು ತೆಗೆದು ನೀರನ್ನು ಕೊಡುವುದಕ್ಕೆ ಆಗದೆ ಇದ್ದುದರಿಂದ ಕೆಲವುಕಡೆ ಸಾಗುವಳಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿಲ್ಲ.

ಶ್ರೀ ಎ. ಭೀಮಪ್ಪ ನಾಯಕ್.—ವಾಣಿವಿಲಾಸ ಸಾಗರಕ್ಕೆ ಸಾಕಾಗುವುದಿಲ್ಲವಾದುದರಿಂದ ಯಗಚಿ ಹೊಳೆಯಿಂದ ನೀರನ್ನು ತರಬೇಕೆಂದು ಸರ್ಕಾರದವರಿಗೆ ಪ್ರತಿವರ್ಷವೂ ಮನವಿಗಳು ಬರುತ್ತಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮನವಿಗಳಿಗಿಂತಲೂ ಮೇಲಾಗಿ ಈ ಪ್ರಾಜೆಕ್ಟನ್ನು ಪ್ರಾರಂಭಮಾಡುವಾಗಲೇ ಅಂಥ ಯೋಚನೆ ಇತ್ತು. ಅದಕ್ಕೋಸ್ಕರ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಧ್ಯವೆಂಬುದನ್ನೂ ಯೋಚನೆಮಾಡಿದ್ದರು. ಈಚೆಗೆ ಅದಕ್ಕೆ ಒಂದು ಕೋಟಿ ರೂಪಾಯಿಗಳವರೆಗೂ ಆಗುತ್ತದೆಂದು ತಿಳಿದು ಬಂದಿದೆ. ವಾಣಿವಿಲಾಸಸಾಗರದ ನೀರು ಈಗಿರುವ ಅಚ್ಚುಕಟ್ಟಿಗೆ ಸಾಕಾಗುತ್ತದೆ. ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಅದಕ್ಕೆ ತಕ್ಕ ಪ್ರತಿಫಲ ಬರುವುದಿಲ್ಲವೆಂಬ ಕಾರಣದಿಂದ ಹೆಚ್ಚಿಗೆ ಹಣ ಖರ್ಚುಮಾಡುವ ಯೋಚನೆಯನ್ನು ನಿಲ್ಲಿಸಿದ್ದೇವೆ.

ಶ್ರೀ ಎ. ಭೀಮಪ್ಪ ನಾಯಕ್.—ಆ ರೀತಿ ಒಂದು ಕೋಟಿ ರೂಪಾಯಿ ಖರ್ಚುಮಾಡಿ ಯಗಚಿ ಹೊಳೆಯಿಂದ ನೀರನ್ನು ವಾಣಿವಿಲಾಸಸಾಗರಕ್ಕೆ ಒಂದು ನಾಲೆಯ ಮೂಲಕ ತಂದರೆ 50 ಸಾವಿರ ಎಕರೆವರೆಗೆ ಜಮೀನು ಸಾಗುವಳಿಯಾಗುತ್ತದೆಂದುಜನರ ಅಭಿಪ್ರಾಯವಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಚ್. ಕೆ ವೀರಣ್ಣ ಗೌಡ.—ಆ ವಿಷಯ ಶ್ರೀ ಭೀಮಪ್ಪ ನಾಯಕರಿಗೆ ಗೊತ್ತಿದೆ. ಜನರು ಅಭಿಪ್ರಾಯವನ್ನು ಊಹೆಯಮೇಲೆ, ಅಂದಾಜಿನ ಮೇಲೆ ಮಾಡಿಕೊಳ್ಳುತ್ತಾರೆ. ಇಂಜಿನಿಯರಿಂಗ್ ಇಲಾಖೆಯವರು ಸರ್ವೆಮಾಡಿ, ಎಸ್ಟಿಮೇಟ್‌ಮಾಡಿ, ತಿಳಿಸಿರುವ ಕರಾರುವಾಕ್ಕಾದ ವಿಚಾರ ನನ್ನಲ್ಲಿದೆ.

ಶ್ರೀ ಎ. ಭೀಮಪ್ಪ ನಾಯಕ್.—ಸರ್ವೆ ಇಲಾಖೆಯವರು ಈ ನಿಮಿಷದವರೆಗೂ ಸರ್ವೆ ಮಾಡಿಲ್ಲ, ಎಸ್ಟಿಮೇಟ್‌ಮಾಡಿಲ್ಲ, ಎಷ್ಟು ನೀರು ಬರುತ್ತದೆ, ಎಷ್ಟು ಎಕರೆಯನ್ನು ಸಾಗುವಳಿ ಮಾಡಬಹುದು ಎನ್ನುವುದನ್ನು ಪರಿಶೀಲಿಸಿ ವಿವರವಾದ ರಿಪೋರ್ಟ್ ತರಿಸಿಕೊಂಡಿಲ್ಲವೆನ್ನುವುದು ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ವೆಮಾಡಿದ್ದಾರೆ, ಎಸ್ಟಿಮೇಟ್ ಮಾಡಿದ್ದಾರೆ, 20 ಲಕ್ಷ ರೂಪಾಯಿಗಳಿಗೆ ಅಂದಾಜು ತಯಾರಾಗಿತ್ತು ಎಂದು ಹೇಳಿದ್ದೇನೆ. ಇದರಿಂದ 3,000 cft ನೀರು ಮಾತ್ರ ಬರುತ್ತದೆ ಎಂದು ಹೇಳಿದ್ದಾರೆ. ಯಗಚಿ ಹೊಳೆಯ ನೀರನ್ನು ನೀರಾವರಿ ಕೆಲಸಕ್ಕೆ ಈಗಾಗಲೇ ಉಪಯೋಗಿಸಿಕೊಳ್ಳುತ್ತಿರುವುದರಿಂದ ಪ್ರವಾಹ ಬಂದಾಗ ಬರುವ ಹೆಚ್ಚು ನೀರನ್ನು ಮಾತ್ರ ವಾಣಿವಿಲಾಸ ಸಾಗರಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಯಗಚಿಹೊಳೆಯನ್ನು ಪೂರ್ತಿಯಾಗಿ drain off ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹೊಳೆಯಲ್ಲಿ ಪ್ರವಾಹ ಎಷ್ಟರಮಟ್ಟಿಗೆ ಬರುತ್ತದೆಂದು ನೋಡಿಕೊಂಡು, ಸಾಧ್ಯವಾದಷ್ಟು ನೀರು ದೊರೆಯಬಹುದೆಂಬುದನ್ನು ತಿಳಿಸಿದ್ದಾರೆ.

ಶ್ರೀ ಎ. ಭೀಮಪ್ಪ ನಾಯಕ್.—ಯಗಚಿ ಹೊಳೆಯಿಂದ ಎಷ್ಟು ಎಕರೆಗಳಿಗೆ ಆಗುವಷ್ಟು ನೀರು ಅಚ್ಚುಕಟ್ಟಿಗೆ ದೊರೆಯುತ್ತದೆಂದು ತಿಳಿಯಲು ದಯವಿಟ್ಟು ಇನ್ನೊಂದು ಸಲ ಸರ್ವೆಮಾಡಿಸುವುದಕ್ಕಾಗುತ್ತದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಲಹೆಕೊಟ್ಟಿದ್ದಾರೆ, ಯೋಚನೆಮಾಡುತ್ತೇವೆ.

ಶ್ರೀ ಬಿ. ಎಸ್. ಶಂಕರಪ್ಪ.—ಈ ಕೆರೆಗೆ ನೀರು ಬರತಕ್ಕ catchment area ದಲ್ಲಿರುವ ಕೆರೆಗಳ ಪೈಕಿ ಕೆಲವುಕೆರೆಗಳ ವಿಸ್ತೀರ್ಣವನ್ನು ಎತ್ತರಿಸಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಎಷ್ಟು ಕೆರೆಗಳ ವಿಸ್ತೀರ್ಣವನ್ನು ಎತ್ತರಿಸಿದ್ದಾರೆಂಬುದು ಗೊತ್ತಿಲ್ಲ. ಇದರ ಮೇಲ್ಗಡೆ ಸಾವಿರ ಕೆರೆಗಳಿವೆ. ಅವುಗಳ seepage water ಇದಕ್ಕೆ ಬರುತ್ತದೆ. ಮಳೆ ಹೆಚ್ಚಾಗಿ ಬಾರದೆ ಇರುವ ವರ್ಷ ಮತ್ತು ಸಾಮಾನ್ಯವಾಗಿ ಮಳೆ ಬಂದ ವರ್ಷ ನೀರು ಆಯಾ ಕೆರೆಗಳ ಕೆಳಗಿನ ಅಚ್ಚುಕಟ್ಟಿಗೇ ಸಾಕಾಗುವುದಿಲ್ಲ. ಮಳೆ ಹೆಚ್ಚಾಗಿ ಬಂದ ವರ್ಷ ಈ ಕೆರೆಗಳ ಕೋಡಿಬಿದ್ದನೀರು ವಾಣಿವಿಲಾಸ ಸಾಗರಕ್ಕೆ ಬರುತ್ತದೆ. ಸಾಧಾರಣ ಮಳೆ ಬಂದಾಗ ಆಯಾಕೆರೆಗಳಿಗೇ ಸಾಕಾಗುವಷ್ಟು ನೀರು ಬರುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—1914 ರಿಂದೀಚೆಗೆ ಮೂರು ಅಡಿಗಳಷ್ಟು ಕೆರೆ ಏರಿಯನ್ನು ಎತ್ತರಿಸಿರುವ ಕೆರೆಗಳ ಹೆಸರನ್ನು ಕೊಟ್ಟರೆ ಕ್ರಮತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಿಂದಿರುವ ಜಮೀನಿಗೆ ನಷ್ಟವುಂಟಾಗದ ಹಾಗೆ ಮಾಡಿರಬಹುದು.

ಶ್ರೀ ಬಿ. ಎಸ್. ಶಂಕರಪ್ಪ.—ಕೆರೆಯ ಕಚ್ಚೆಯನ್ನು ತುಂಬ ಹೆಚ್ಚಿನಕೂಡದೆಂದು ಕಾನೂನು ಇಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ. ಕೆರೆಯ ಕೋಡಿಯನ್ನೂ ಮತ್ತು ಏರಿಯನ್ನೂ ಎತ್ತರಿಸಿದರೆ ಹಿಂದುಗಡೆ ಜಮೀನು ಮುಳುಗಡೆಯಿಂದ ಹೆಚ್ಚು ಅನಾನುಕೂಲವಾಗುವ ಹಾಗಿದ್ದರೆ ಮಾಡಕೂಡದು ಎಂದಿದೆ. ಅನೇಕ ಕಡೆ ಕೆರೆ ಏರಿಯನ್ನು ಉಠಾವಣೆ ಮಾಡಿ ಹೆಚ್ಚುನೀರು ನಿಲ್ಲುವಹಾಗೆ ಮಾಡುತ್ತಿದ್ದಾರೆ. ಮುಳುಗಡೆಯಾಗತಕ್ಕ ಜಮೀನಿನಿಂದ ಜಾಸ್ತಿ ನಷ್ಟವಾಗದೆ ಅದರಿಂದ ಹೆಚ್ಚು ಅಚ್ಚುಕಟ್ಟು ನೀರಾವರಿಯಾಗುವ ಹಾಗಿದ್ದರೆ ಏರಿಯನ್ನು ಉಟಾವಣೆ ಮಾಡಬಹುದು.

ಶ್ರೀ ಜಿ. ಶಿವಪ್ಪ.—ಇದರ ಮೇಲ್ಗಡೆ ಸಾವಿರ ಕೆರೆಗಳಿವೆ ಎಂದು ಹೇಳಿದಿರಿ. 40 ಕೆರೆಗಳು ಮಾತ್ರ ಇವೆಯಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾವಿರ ಕೆರೆಗಳಿವೆ ಎಂದು ರಿಕಾರ್ಡಿನಲ್ಲಿದೆ.

Sri H. M. CHANNABASAPPA.—Will the Government be pleased to tell me whether 25,000 acres is the estimated achkat under this resorvoir?

Sri H. K. VEERANNA GOWDH.—Yes. At present, we have only 18,000 acres.

Sri H. M. CHANNABASAPPA.—Is it possible for us to develop another 7,000 acres?

Sri H. K. VEERANNA GOWDH.—According to the records available, the tank was completed in 1901 or so. For nine years the average yield including good, bad and average rainfall, it was estimated that water could be supplied only to the extent of 18,000 acres.

Sri H. M. CHANNABASAPPA.—How many acres come under wet, garden and dry cultivation?

Sri H. K. VEERANNA GOWDH.—Please put a question.

Sri H. M. CHANNABASAPPA.—I am asking a question. You have given the answer that 18,000 acres is the atchkat under this tank. I am asking for information as to how many acres come under wet, how many under garden and how many acres under dry cultivation?

Sri H. K. VEERANNA GOWDH.—I have answered it. Instead of saying notice, I have stated that I will answer when a question comes up.

Sri H. M. CHANNABASAPPA.—Will he Government be pleased to tell me that if the new project is executed after spending one crore of rupees, what is the extra area that will come in?

Sri H. K. VEERANNA GOWDH.—It must be investigated.

Sri H. M. CHANNABASAPPA.—Government has said that one crore is the estimated cost and you have also stated that about 7,000 acres more may come under the achkat if the work is completed and now you state that it has to be investigated. Will the Government be pleased to tell me how they came to this conclusion?

Sri H. K. VEERANNA GOWDH.—Formerly the estimated cost for the project was 20 lakhs. After re-estimation it is stated that one crore is required. Probably no detailed estimate was prepared on the previous occasion.

Sri H. M. CHANNABASAPPA.—After spending 20 lakhs, the increase of achkat would be 7,000 acres. Is it not so?

Sri H. K. VEERANNA GOWDH.—I have said that the original estimate was 20 lakhs. In relation to that this expenditure of one crore of rupees is prohibitive.

Upgrading of Intermediate Colleges at District Head quarters into First Grade Colleges.

Q.—321. Sri H. C. LINGA REDDY (Malur).—

Will the Government be pleased to state :—

(*a*) whether an assurance had been given by the Education Minister two years ago in the course of the discussion on demands for grant on Education in the Budget Session that all the present Intermediate Colleges at the District Headquarters will be upgraded into First Grade Colleges in the State;

(*b*) if so, the action thereon;

(*c*) in how many District Headquarters the Intermediate Colleges were converted into First Grade Colleges;

(*d*) what will be the extra cost involved for conversion of all the Intermediate Colleges into First Grade Colleges?